**ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ, ಶ್ರೀರಂಗಪಟ್ಟಣ.**

**ಕ್ರಿಮಿನಲ್ ಮೊಕದ್ದಮೆ ಸಂಖ್ಯೆ : 42/2023**

**ಚಾ.ಸಾ. :-2**
**ಪ್ರಾ.ಸಾ. :-2**

| | |
|---|---|
| ಹೆಸರು | : ಕೃಷ್ಣೇಗೌಡ |
| ತಂದೆಯ ಹೆಸರು | : ಚಿಕ್ಕಲಿಂಗಯ್ಯ |
| ವಯಸ್ಸು | : 61 ವರ್ಷ |
| ಉದ್ಯೋಗ | : ವ್ಯವಸಾಯ |
| ವಾಸಸ್ಥಳ | : ಕೂಡಲಕುಪ್ಪೆ ಗ್ರಾಮ |

---

**ಪ್ರಮಾಣೀಕರಿಸಲಾದ ದಿನಾಂಕಃ- 16.02.2026**

**ಮುಖ್ಯ ವಿಚಾರಣೆ : ಮಾನ್ಯ ಸ.ಸ.ಅ.ರವರಿಂದ :**

ಚಾ.ಸಾ-1 ನನ್ನ ಮಗ. ಮೃತ ಪ್ರಕಾಶ್ ನನಗೆ ಪರಿಚಯವಿಲ್ಲ. ಸುಮಾರು ಎರಡೂವರೆ ವರ್ಷಗಳ ಹಿಂದೆ ನಾನು ಮತ್ತು ನನ್ನ ಮಗ ಎತ್ತಿನಗಾಡಿಯಲ್ಲಿ ಕಬ್ಬನ್ನು ತುಂಬಿಕೊಂಡು ಶ್ರೀರಂಗಪಟ್ಟಣ-ಪಾಂಡವಪುರ ರಸ್ತೆಯಲ್ಲಿ ಹೋಗುತ್ತಿದ್ದೆವು. ಬೆಳಿಗ್ಗೆ ಸುಮಾರು 11.00-11.30ರ ಸಮಯದಲ್ಲಿ ನಮ್ಮ ದಿಕ್ಕಿನಲ್ಲಿಯೇ ನಮ್ಮ ಪಕ್ಕದಲ್ಲಿ ಒಂದು ದ್ವಿಚಕ್ರ ವಾಹನ ಹೋಗುತ್ತಿತ್ತು. KSRTC Bus ನಮ್ಮ ದಿಕ್ಕಿನಲ್ಲಿಯೇ ಬಂದು ನಮ್ಮ ಪಕ್ಕದಲ್ಲಿ ಹೋಗುತ್ತಿದ್ದ ದ್ವಿಚಕ್ರ ವಾಹನವನ್ನು ಹಿಂದಿಕ್ಕಲು ಹೋಗಿ ಸದರಿ ದ್ವಿಚಕ್ರ ವಾಹನಕ್ಕೆ ಡಿಕ್ಕಿಪಡಿಸಿ ಅಪಘಾತ ಮಾಡಿರುತ್ತಾರೆ. ಆ ಸಮಯದಲ್ಲಿ KSRTC Bus ನಮ್ಮ ಎತ್ತಿನಗಾಡಿಯ ನೊಗಕ್ಕೆ ಡಿಕ್ಕಿಪಡಿಸಿದ್ದು, ಹಸುವಿನ ಹಿಂಭಾಗದ ಬಲಗಾಲಿಗೂ ಗಾಯವಾಗಿರುತ್ತದೆ. ದ್ವಿಚಕ್ರ ವಾಹನದಲ್ಲಿ ಬರುತ್ತಿದ್ದ ವ್ಯಕ್ತಿಯು ಬಸ್ಸಿನ ಎಡಭಾಗದ ಹಿಂಬದಿಯ ಚಕ್ರಕ್ಕೆ ಸಿಕ್ಕಿಕೊಂಡು ತೀವ್ರ ಗಾಯಗಳಾಗಿದ್ದು, ಅವರನ್ನು ಆಸ್ಪತ್ರೆಗೆ ದಾಖಲು

ಮಾಡಿರುತ್ತಾರೆ. ನಮ್ಮ ಎತ್ತಿಗೆ ವೈದ್ಯರು ಚಿಕಿತ್ಸೆ ನೀಡಿರುತ್ತಾರೆ. ಅದೇ ದಿನ ಗಾಯಾಳು ಮೃತಪಟ್ಟಿರುವುದಾಗಿ ನನಗೆ ಗೊತ್ತಾಗಿರುತ್ತದೆ. KSRTC Bus ಚಾಲಕನ ತಪ್ಪಿನಿಂದ ಅಪಘಾತವಾಗಿರುತ್ತದೆ.

**ಆರೋಪಿ ಪರ ವಕೀಲರು ಗೈರು ಹಾಜರಾಗಿದ್ದು, ಆರೋಪಿ ಕಾಲಾವಕಾಶ ಕೋರಿದ್ದು, ಯಾವುದೇ ಸಕಾರಣಗಳು ಕಂಡು ಬರದೇ ಇದ್ದುದರಿಂದ ಸದರಿಯವರ ಪ್ರಾರ್ಥನೆಯನ್ನು ತಿರಸ್ಕರಿಸಿ, ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಈ ದಿನ ಬೆರಳಚ್ಚು ಮಾಡಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ ಎಂದು ಓದಲಾಗಿದೆ.

**ಪ್ರಧಾನ ಹಿರಿಯ ಸಿಜೆ ಮತ್ತು**
**ಜೆ.ಎಂ.ಎಫ್.ಸಿ., ಶ್ರೀರಂಗಪಟ್ಟಣ.**

**ಸಾಕ್ಷಿದಾರರ ಸಹಿ.**